# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಶಾಶ್ವತ ನಿವಾಸ ಪ್ರಮಾಣ ಪತ್ರ (Permanent Residence Certificate -PRC) ನೀಡುವ ಕುರಿತು ಸಮಗ್ರ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.**

* * * * *

**ಪ್ರಸ್ತಾವನೆ:**

ಪ್ರಸ್ತುತ ಕಂದಾಯ ಇಲಾಖೆಯು ಕಾಲಕಾಲಕ್ಕೆ ಹೊರಡಿಸಿರುವ ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳ ಅನುಸಾರ ಕಂದಾಯ ಆಡಳಿತದ ಮೂಲಕ ಅರ್ಹ ವ್ಯಕ್ತಿಗಳಿಗೆ ವಾಸಸ್ಥಳ ಪ್ರಮಾಣ ಪತ್ರ (Residential Certificate) ಹಾಗೂ ಡೊಮಿಸೈಲ್ ಪ್ರಮಾಣ ಪತ್ರ (Domicile Certificate)ಗಳನ್ನು ನೀಡಲಾಗುತ್ತಿದೆ.

ಮತ್ತು ಕಂದಾಯ ಇಲಾಖೆಯಿಂದ ನೀಡಲಾಗುತ್ತಿರುವ ಡೊಮಿಸೈಲ್ ಪ್ರಮಾಣ ಪತ್ರವು ಅದನ್ನು ಹೊಂದಿರುವ ವ್ಯಕ್ತಿಯು ಕರ್ನಾಟಕ ರಾಜ್ಯದ ಶಾಶ್ವತ ನಿವಾಸಿಯಾಗಿರುವುದನ್ನು ದೃಢೀಕರಿಸುವ ದಾಖಲೆಯಾಗಿದ್ದು, ಪ್ರವೇಶಾತಿ, ವಿದ್ಯಾರ್ಥಿವೇತನ, ಉದ್ಯೋಗ, ಕಲ್ಯಾಣ ಯೋಜನೆಗಳು ಹಾಗೂ ಇತರೆ ಕಾನೂನುಬದ್ಧ ಆಡಳಿತಾತ್ಮಕ ಉದ್ದೇಶಗಳಿಗಾಗಿ ವ್ಯಾಪಕವಾಗಿ ಬಳಸಲ್ಪಡುತ್ತಿದೆ.

ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964, ಕರ್ನಾಟಕ ಭೂ ಕಂದಾಯ ನಿಯಮಗಳು, 1966, ಕರ್ನಾಟಕ ಭೂ ಮಂಜೂರು ನಿಯಮಗಳು, 1969 ಹಾಗೂ ಕಂದಾಯ ಇಲಾಖೆಯ ಆಡಳಿತಕ್ಕೆ ಒಳಪಡುವ ವಿವಿಧ ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಶಾಶ್ವತ ನಿವಾಸದ ದೃಢೀಕರಣವು ಅರ್ಹತೆಯ ಮಾನದಂಡಗಳಲ್ಲಿ ಒಂದಾಗಿದ್ದು;

ಮತ್ತು ರಾಜ್ಯಾದ್ಯಂತ ಶಾಶ್ವತ ನಿವಾಸ ಪ್ರಮಾಣ ಪತ್ರಗಳನ್ನು ನೀಡುವ ಸಂಬಂಧ ಏಕರೂಪದ, ಪಾರದರ್ಶಕ ಹಾಗೂ ಕಾನೂನುಬದ್ಧವಾಗಿ ಸುಸ್ಥಿರವಾದ ವ್ಯವಸ್ಥೆಯನ್ನು ರೂಪಿಸುವುದು ಅಗತ್ಯವೆಂದು ಸರ್ಕಾರವು ಮನಗಂಡಿರುತ್ತದೆ.

ಮತ್ತು ಅನ್ವಯವಾಗುವ ಅಧಿನಿಯಮಗಳು, ನಿಯಮಗಳು, ಸರ್ಕಾರಿ ಆದೇಶಗಳು, ಅಧಿಸೂಚನೆಗಳು ಹಾಗೂ ಯೋಜನಾ ಮಾರ್ಗಸೂಚಿಗಳಲ್ಲಿ ಶಾಶ್ವತ ನಿವಾಸವನ್ನು ಅರ್ಹತೆಯ ಮಾನದಂಡವಾಗಿ ನಿಗದಿಪಡಿಸಿರುವ ಸಂದರ್ಭಗಳಲ್ಲಿ, ಶಾಶ್ವತ ನಿವಾಸವನ್ನು

ದೃಢೀಕರಿಸಲು ಏಕರೂಪದ ವ್ಯವಸ್ಥೆಯನ್ನು ಕಲ್ಪಿಸುವುದು ಹಾಗೂ ಅರ್ಹತೆಯನ್ನು ನಿರ್ಧರಿಸಲು ಅನುಕೂಲವಾಗುವ ಉದ್ದೇಶದಿಂದ ಶಾಶ್ವತ ನಿವಾಸ ಪ್ರಮಾಣ ಪತ್ರವನ್ನು ನೀಡುವುದು ಅಗತ್ಯವೆಂದು ಸರ್ಕಾರವು ಅಭಿಪ್ರಾಯಪಟ್ಟಿರುತ್ತದೆ.

ಆದ್ದರಿಂದ, ಭಾರತದ ಸಂವಿಧಾನದ ಅನುಚ್ಛೇದ 162ರ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಕಾರ್ಯನಿರ್ವಾಹಕ ಅಧಿಕಾರ ಹಾಗೂ ಅನುಚ್ಛೇದ 166ರ ಅನ್ವಯ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964, ಕರ್ನಾಟಕ ಭೂ ಕಂದಾಯ ನಿಯಮಗಳು, 1966, ಕರ್ನಾಟಕ ಭೂ ಮಂಜೂರು ನಿಯಮಗಳು, 1969, ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಹಾಗೂ ಅದರಡಿ ಹೊರಡಿಸಲಾದ ಅಧಿಸೂಚನೆಗಳು, ವಾಸಸ್ಥಳ ಮತ್ತು ಡೊಮಿಸೈಲ್ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸಲಾದ ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳು ಮತ್ತು ಈ ಸಂಬಂಧ ಸರ್ಕಾರಕ್ಕೆ ಪ್ರದತ್ತವಾದ ಇತರೆ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಕಂಇ. 36 ಎಜೆಎಸ್ 2026, ಬೆಂಗಳೂರು,**

**ದಿನಾಂಕ. 29.06.2026**

ಮೇಲ್ಕಂಡ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಶಾಶ್ವತ ನಿವಾಸ ಪ್ರಮಾಣ ಪತ್ರಗಳನ್ನು ನೀಡುವ ಸಂಬಂಧ (Permanent Residence Certificate - PRC) ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಿ ಆದೇಶಿಸಿದೆ..

**1. ಸಂಕ್ಷಿಪ್ತ ಶೀರ್ಷಿಕೆ**

ಈ ಮಾರ್ಗಸೂಚಿಗಳನ್ನು “ಕರ್ನಾಟಕ ಶಾಶ್ವತ ನಿವಾಸ ಪ್ರಮಾಣ ಪತ್ರ (Permanent Residence Certificate - PRC) ಮಾರ್ಗಸೂಚಿಗಳು, 2026” ಎಂದು ಕರೆಯತಕ್ಕದ್ದು.

**2. ಉದ್ದೇಶ**

ರಾಜ್ಯದಾದ್ಯಂತ ಶಾಶ್ವತ ನಿವಾಸ ಪ್ರಮಾಣ ಪತ್ರ ಹಾಗೂ ಡೊಮಿಸೈಲ್ ಪ್ರಮಾಣ ಪತ್ರಗಳನ್ನು ನೀಡುವ ಸಂಬಂಧ ಏಕರೂಪದ, ಪಾರದರ್ಶಕ ಹಾಗೂ ಕಾನೂನುಬದ್ಧವಾಗಿ ಸುಸ್ಥಿರವಾದ ವ್ಯವಸ್ಥೆಯನ್ನು ರೂಪಿಸುವುದು ಈ ಮಾರ್ಗಸೂಚಿಗಳ ಉದ್ದೇಶವಾಗಿದೆ.

**3. ಸಕ್ಷಮ ಪ್ರಾಧಿಕಾರ**

(i) ಸರ್ಕಾರ ಅಥವಾ ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಯಿಂದ ಅಧಿಕೃತಗೊಳಿಸಲಾದ ಉಪ ತಹಶೀಲ್ದಾರ್ / ತಹಶೀಲ್ದಾರ್ ಅಥವಾ ಇತರೆ ಯಾವುದೇ ಅಧಿಕಾರಿ – ಪ್ರಮಾಣ ಪತ್ರ ನೀಡುವ ಪ್ರಾಧಿಕಾರ (Issuing Authority).

(ii) ಸಹಾಯಕ ಆಯುಕ್ತರು – ಮೇಲ್ಮನವಿ ಪ್ರಾಧಿಕಾರ (Appellate Authority).

(iii) ಜಿಲ್ಲಾಧಿಕಾರಿಗಳು – ಪುನರ್ ಪರಿಶೀಲನಾ ಪ್ರಾಧಿಕಾರ (Revisional Authority).

**4. ಶಾಶ್ವತ ನಿವಾಸ ಪ್ರಮಾಣ ಪತ್ರ ನೀಡಲು ಅರ್ಹತೆ**

**4.1** ಪ್ರಮಾಣ ಪತ್ರ ನೀಡುವ ಪ್ರಾಧಿಕಾರವು ಅಗತ್ಯ ವಿಚಾರಣೆ ಹಾಗೂ ಪರಿಶೀಲನೆಯ ನಂತರ ಅರ್ಜಿದಾರರು ಕರ್ನಾಟಕ ರಾಜ್ಯದ ನಿಜವಾದ ಮತ್ತು ಶಾಶ್ವತ ನಿವಾಸಿಯಾಗಿದ್ದಾರೆ ಎಂಬ ಬಗ್ಗೆ ಖಚಿತಪಡಿಸಿಕೊಂಡು ಶಾಶ್ವತ ನಿವಾಸ ಪ್ರಮಾಣ ಪತ್ರವನ್ನು ನೀಡಬಹುದು.

**4.2** ಮೇಲ್ಕಂಡಂತೆ ಖಚಿತಗೊಳಿಸಿಕೊಳ್ಳುವ ಸಂದರ್ಭದಲ್ಲಿ ಪ್ರಮಾಣ ಪತ್ರ ನೀಡುವ ಪ್ರಾಧಿಕಾರವು ಈ ಕೆಳಕಂಡ ಒಂದು ಅಥವಾ ಹೆಚ್ಚಿನ ಅಂಶಗಳನ್ನು ಪರಿಗಣಿಸಬಹುದು:

- ಕರ್ನಾಟಕದಲ್ಲಿ ಜನನ– ಅರ್ಜಿದಾರರು ಕರ್ನಾಟಕ ರಾಜ್ಯದಲ್ಲಿ ಜನಿಸಿರಬೇಕು.
- ಸಾಮಾನ್ಯ ವಾಸಸ್ಥಳ – ಅರ್ಜಿದಾರರು ಅಥವಾ ಅವರ ತಂದೆ/ತಾಯಿ ಅಥವಾ ಕಾನೂನುಬದ್ಧ ಪಾಲಕರು ಕರ್ನಾಟಕ ರಾಜ್ಯದಲ್ಲಿ ಸತತವಾಗಿ ಕನಿಷ್ಠ ಹತ್ತು (10) ವರ್ಷಗಳ ಕಾಲ ಸಾಮಾನ್ಯವಾಗಿ ವಾಸವಾಗಿರಬೇಕು.
- ಶಿಕ್ಷಣ – ಅರ್ಜಿದಾರರು ಕರ್ನಾಟಕದಲ್ಲಿನ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ದ್ವಿತೀಯ ಪಿಯುಸಿ / 12ನೇ ತರಗತಿ ಅಥವಾ ತತ್ಸಮಾನ ಹಂತದವರೆಗೆ ಕನಿಷ್ಠ ಹತ್ತು (10) ಶೈಕ್ಷಣಿಕ ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು.
- ಪೋಷಕರು ಅಥವಾ ಸಂಗಾತಿಯ ವಾಸಸ್ಥಳ – ಅರ್ಜಿದಾರರ ತಂದೆ, ತಾಯಿ, ಕಾನೂನುಬದ್ಧ ಪಾಲಕರು ಅಥವಾ ಪತಿ/ಪತ್ನಿಯು ಕರ್ನಾಟಕದಲ್ಲಿ ಸಾಮಾನ್ಯ ಹಾಗೂ ಶಾಶ್ವತ ನಿವಾಸಿಯಾಗಿರಬೇಕು.
- ವಸತಿ ಆಸ್ತಿ – ಅರ್ಜಿದಾರರು ಅಥವಾ ಅವರ ಕುಟುಂಬವು ಕರ್ನಾಟಕದಲ್ಲಿ ವಸತಿ ಅಥವಾ ಇತರೆ ಸ್ಥಿರಾಸ್ತಿಯ ಮಾಲೀಕತ್ವವನ್ನು ಹೊಂದಿರಬೇಕು ಅಥವಾ ಕಾನೂನುಬದ್ಧವಾದ ವಾರಸುದಾರರಾಗಿರಬೇಕು ಅಥವಾ ಬಳಸುತ್ತಿರಬೇಕು.

- ಸರ್ಕಾರಿ ದಾಖಲೆಗಳು – ಮತದಾರರ ಪಟ್ಟಿ, ಆಧಾರ್, ಪಡಿತರ ಚೀಟಿ, ಕಂದಾಯ ದಾಖಲೆಗಳು ಅಥವಾ ಇತರೆ ಸರ್ಕಾರಿ ದಾಖಲೆಗಳಲ್ಲಿ ಅರ್ಜಿದಾರರು ಅಥವಾ ಅವರ ಪೋಷಕರ ಹೆಸರು ಸಾಮಾನ್ಯ ನಿವಾಸಿಯಾಗಿ ದಾಖಲಾಗಿರಬೇಕು.
- ಸರ್ಕಾರಿ / ಸಾರ್ವಜನಿಕ ಸೇವೆ – ಅರ್ಜಿದಾರರು ಅಥವಾ ಅವರ ತಂದೆ/ತಾಯಿಯು ಕರ್ನಾಟಕ ರಾಜ್ಯ ಸರ್ಕಾರ, ಸ್ಥಳೀಯ ಸಂಸ್ಥೆ ಅಥವಾ ಸಾರ್ವಜನಿಕ ಸಂಸ್ಥೆಗಳಲ್ಲಿ ಗಣನೀಯ ಅವಧಿಯಸೇವೆ ಸಲ್ಲಿಸಿರಬೇಕು.

- ವಿವಾಹ – ಅರ್ಜಿದಾರರು ಕರ್ನಾಟಕದಲ್ಲಿ ವಾಸಿಸುವ ವ್ಯಕ್ತಿಯನ್ನು ವಿವಾಹವಾಗಿದ್ದು, ರಾಜ್ಯದಲ್ಲಿ ವಾಸವಿರಬೇಕು.
- ಇತರೆ ಪುರಾವೆಗಳು – ಕರ್ನಾಟಕವೇ ಅರ್ಜಿದಾರರ ಪ್ರಮುಖ ಹಾಗೂ ಶಾಶ್ವತ ವಾಸಸ್ಥಳವಾಗಿದೆ ಎಂಬುದನ್ನು ದೃಢೀಕರಿಸುವ ಯಾವುದೇ ವಿಶ್ವಾಸಾರ್ಹ ದಾಖಲಾತಿ, ವಿದ್ಯುನ್ಮಾನ ಅಥವಾ ಮೌಖಿಕ ಸಾಕ್ಷ್ಯ.

**4.3 ಮಾರ್ಗದರ್ಶಕ ತತ್ವಗಳು**

- ಮೇಲ್ಕಂಡ ಅಂಶಗಳು ಕೇವಲ ಮಾರ್ಗದರ್ಶಕವಾಗಿದ್ದು, ಅವು ವಿವರಣಾತ್ಮಕ ಅಥವಾ ಸಮಗ್ರವಾಗಿರುವುದಿಲ್ಲ.
- ಮೇಲ್ಕಂಡ ಯಾವುದೇ ಒಂದು ಅಂಶದ ಅಲಭ್ಯತೆಯಿಂದ ಅರ್ಜಿದಾರರನ್ನು ಅನರ್ಹರನ್ನಾಗಿ ಪರಿಗಣಿಸುವಂತಿಲ್ಲ.
- ಅರ್ಜಿಯ ಮೇಲಿನ ನಿರ್ಧಾರವು ಲಭ್ಯವಿರುವ ಎಲ್ಲಾ ಪುರಾವೆಗಳ ಸಮಗ್ರ ಪರಿಶೀಲನೆಯ ಆಧಾರದ ಮೇಲೆ ಕೈಗೊಳ್ಳತಕ್ಕದ್ದು.
- ದಾಖಲಾತಿ ಪುರಾವೆಗಳು ಅಪೂರ್ಣವಾಗಿದ್ದಲ್ಲಿ, ಸ್ಥಳೀಯ ವಿಚಾರಣೆ ಹಾಗೂ ಇತರೆ ವಿಶ್ವಾಸಾರ್ಹ ಪುರಾವೆಗಳ ಆಧಾರದ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ಧಾರ ಕೈಗೊಳ್ಳತಕ್ಕದ್ದು;
- ಶಾಶ್ವತ ವಾಸ ಪ್ರಮಾಣ ಪತ್ರವನ್ನು ಮಂಜೂರು ಮಾಡುವ ಅಥವಾ ನಿರಾಕರಿಸುವ ಪ್ರತಿಯೊಂದು ಆದೇಶವೂ ಕಾರಣಸಹಿತ ವಿವರವಾದ ಆದೇಶ (speaking order) ಆಗಿರತಕ್ಕದ್ದು.

## 5. ಪರಿಶೀಲನೆ

ಪ್ರಮಾಣ ಪತ್ರವನ್ನು ನೀಡುವ ಪ್ರಾಧಿಕಾರವು ಅಗತ್ಯವಿದ್ದಲ್ಲಿ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು ಅಥವಾ ಇತರೆ ಅಧಿಕಾರಿಗಳಿಂದ ವರದಿಯನ್ನು ಪಡೆದು ಸ್ಥಳೀಯ ಪರಿಶೀಲನೆ ನಡೆಸಬಹುದು.

## 6. ಮೇಲ್ಮನವಿ ಮತ್ತು ಪುನರ್ ಪರಿಶೀಲನೆ

ಪ್ರಮಾಣ ಪತ್ರವನ್ನು ನೀಡುವ ಪ್ರಾಧಿಕಾರದ ಆದೇಶದಿಂದ ಬಾಧಿತರಾದ ವ್ಯಕ್ತಿಯು ಆದೇಶದ ದಿನಾಂಕದಿಂದ 30 ದಿನಗಳೊಳಗೆ ಸಹಾಯಕ ಆಯುಕ್ತರ ಮುಂದೆ ಮೇಲ್ಮನವಿ ಸಲ್ಲಿಸಬಹುದು.

ಸಹಾಯಕ ಆಯುಕ್ತರ ಆದೇಶದಿಂದ ಬಾಧಿತರಾದ ವ್ಯಕ್ತಿಯು 60 ದಿನಗಳೊಳಗೆ ಜಿಲ್ಲಾಧಿಕಾರಿಗಳ ಮುಂದೆ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಬಹುದು.

## 7. ಪ್ರಮಾಣ ಪತ್ರದ ಪರಿಣಾಮ

ಈ ಆದೇಶದನ್ವಯ ನೀಡಲಾಗುವ ಶಾಶ್ವತ ನಿವಾಸ ಪ್ರಮಾಣ ಪತ್ರವು ಆಡಳಿತಾತ್ಮಕ ಉದ್ದೇಶಗಳಿಗಾಗಿ ಮಾತ್ರ ಶಾಶ್ವತ ನಿವಾಸದ ಪುರಾವೆಯಾಗಿ ಪರಿಗಣಿಸಲ್ಪಡುತ್ತದೆ.

ಆದಾಗ್ಯೂ, ಈ ಪ್ರಮಾಣ ಪತ್ರವು ಸ್ವತಃ ಯಾವುದೇ ಶಾಸನಬದ್ಧ ಹಕ್ಕು, ಮೀಸಲಾತಿ, ಸರ್ಕಾರಿ ಭೂ ಮಂಜೂರು, ಉದ್ಯೋಗದಲ್ಲಿ ಆದ್ಯತೆ ಅಥವಾ ಇತರೆ ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ. ಅಂತಹ ಪ್ರಯೋಜನಗಳ ಅರ್ಹತೆಯನ್ನು ಸಂಬಂಧಿತ ಅಧಿನಿಯಮಗಳು, ನಿಯಮಗಳು, ಸರ್ಕಾರಿ ಆದೇಶಗಳು, ಅಧಿಸೂಚನೆಗಳು ಹಾಗೂ ಯೋಜನಾ ಮಾರ್ಗಸೂಚಿಗಳ ಪ್ರಕಾರವೇ ನಿರ್ಧರಿಸಲಾಗುತ್ತದೆ.

## 8. ಪ್ರಮಾಣಪತ್ರ ರದ್ದತಿ

8.1 ಪ್ರಮಾಣಪತ್ರ ನೀಡುವ ಪ್ರಾಧಿಕಾರ ಅಥವಾ ಅದರ ಮೇಲಧಿಕಾರಿಗಳು ಸ್ವಯಂಪ್ರೇರಿತವಾಗಿ ಅಥವಾ ದೂರನ್ನು ಸ್ವೀಕರಿಸಿದ ನಂತರ, ಪ್ರಮಾಣಪತ್ರ ಹೊಂದಿರುವವರಿಗೆ ಕೇಳಲು ಸಮಂಜಸವಾದ ಅವಕಾಶವನ್ನು ನೀಡಿದ ನಂತರ ಮತ್ತು ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಯನ್ನು ನಡೆಸಿದ ನಂತರ, ವಂಚನೆ, ವಸ್ತು ಸಂಗತಿಗಳನ್ನು ನಿಗ್ರಹಿಸುವುದು, ತಪ್ಪು ನಿರೂಪಣೆ ಅಥವಾ ನಕಲಿ, ಕೃತಕ ಅಥವಾ ಸುಳ್ಳು ದಾಖಲೆಗಳನ್ನು ತಯಾರಿಸುವ ಮೂಲಕ ಅಥವಾ ಅನರ್ಹ ಯಾರಾದರೂ

ಪ್ರಮಾಣಪತ್ರವನ್ನು ಪಡೆದಿದ್ದಾರೆಂದು ಕಂಡುಬಂದರೆ ಶಾಶ್ವತ ನಿವಾಸ ಪ್ರಮಾಣಪತ್ರವನ್ನು ರದ್ದುಗೊಳಿಸತಕ್ಕದ್ದು;

8.2 ಈ ಮಾರ್ಗಸೂಚಿಗಳ ಅಡಿಯಲ್ಲಿ ಶಾಶ್ವತ ನಿವಾಸ ಪ್ರಮಾಣಪತ್ರವನ್ನು ರದ್ದುಗೊಳಿಸಿದಲ್ಲಿ, ಅಂತಹ ರದ್ದತಿಯು ಅರ್ಜಿದಾರರ ಅಥವಾ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಯಾವುದೇ ಇತರ ವ್ಯಕ್ತಿಯ ವಿರುದ್ಧ ಪ್ರಾರಂಭಿಸಬಹುದಾದ ಯಾವುದೇ ಸಿವಿಲ್, ಕ್ರಿಮಿನಲ್ ಅಥವಾ ಇಲಾಖಾ ವಿಚಾರಣಾ ಕ್ರಮಕ್ಕೆ ಹಾನಿಯಾಗತಕ್ಕದಲ್ಲ;

8.3 ಸುಳ್ಳು ಮಾಹಿತಿಯನ್ನು ಒದಗಿಸುವುದು, ಸುಳ್ಳು ಘೋಷಣೆಗಳನ್ನು ಮಾಡುವುದು ಅಥವಾ ನಕಲಿ, ಕೃತಕ ಅಥವಾ ಸುಳ್ಳು ದಾಖಲೆಗಳನ್ನು ತಯಾರಿಸುವುದು ಅರ್ಜಿದಾರರ ವಿರುದ್ಧ ಮೊಕದ್ದಮೆಗೆ ಮತ್ತು ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಅನುಮತಿಸಬಹುದಾದ ಯಾವುದೇ ಇತರ ಕ್ರಮಕ್ಕೆ ಹೊಣೆಗಾರರನ್ನಾಗಿ ಮಾಡತಕ್ಕದ್ದು;

**9. ಅನುಷ್ಠಾನ:**

ಈ ಸರ್ಕಾರಿ ಆದೇಶದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕಂದಾಯ ಇಲಾಖೆಯು ಸೇವಾ ಸಿಂಧು / ನಾಡಕಚೇರಿ ವ್ಯವಸ್ಥೆಯ ಮೂಲಕ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳನ್ನು (SOPs), ಅರ್ಜಿ ನಮೂನೆಗಳನ್ನು, ಡಿಜಿಟಲ್ ಕಾರ್ಯವಿಧಾನಗಳನ್ನು ಹಾಗೂ ಅಗತ್ಯ ಆಡಳಿತಾತ್ಮಕ ಸೂಚನೆಗಳನ್ನು ಹೊರಡಿಸತಕ್ಕದ್ದು;

**10. ಉಳಿತಾಯ ಮತ್ತು ಪರಿವರ್ತನಾ ನಿಬಂಧನೆಗಳು**

10.1 ಈ ಮಾರ್ಗಸೂಚಿಗಳಲ್ಲಿ ಒಳಗೊಂಡಿರುವ ಯಾವುದೂ ಯಾವುದೇ ಕಾಯ್ದೆ, ನಿಯಮಗಳು, ಸರ್ಕಾರಿ ಆದೇಶ, ಅಧಿಸೂಚನೆ, ನೇಮಕಾತಿ ನಿಯಮಗಳು, ಪ್ರವೇಶ ನಿಯಮಗಳು, ಯೋಜನೆ ಮಾರ್ಗಸೂಚಿಗಳು ಅಥವಾ ಯಾವುದೇ ಇತರ ಶಾಸನಬದ್ಧ ಅಥವಾ ಕಾರ್ಯನಿರ್ವಾಹಕ ಸೂಚನೆಗಳ ಅಡಿಯಲ್ಲಿ ಸೂಚಿಸಲಾದ ನಿವಾಸ ಅಥವಾ ಶಾಶ್ವತ ನಿವಾಸಕ್ಕೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ಅರ್ಹತಾ ಸ್ಥಿತಿಯನ್ನು ಅತಿಕ್ರಮಿಸುವುದಿಲ್ಲ ಅಥವಾ ದುರ್ಬಲಗೊಳಿಸುವುದಿಲ್ಲ. ಯಾವುದೇ ಅಸಂಗತತೆಯ ಸಂದರ್ಭದಲ್ಲಿ, ಅಂತಹ ಪ್ರವೇಶ, ನೇಮಕಾತಿ, ಪ್ರಯೋಜನ, ರಿಯಾಯಿತಿ ಅಥವಾ ಯೋಜನೆಯನ್ನು ನಿಯಂತ್ರಿಸುವ ನಿರ್ದಿಷ್ಟ ನಿಬಂಧನೆಗಳು ಚಾಲ್ತಿಯಲ್ಲಿರುತ್ತವೆ.

10.2 ಈ ಮಾರ್ಗಸೂಚಿಗಳು ಆಯಾ ಕಾಯಿದೆಗಳು, ನಿಯಮಗಳು, ಸರ್ಕಾರಿ ಆದೇಶಗಳು, ಅಧಿಸೂಚನೆಗಳು ಮತ್ತು ಯೋಜನೆ ಮಾರ್ಗಸೂಚಿಗಳ ಅಡಿಯಲ್ಲಿ ಸೂಚಿಸಲಾದ ಅರ್ಹತಾ

ಷರತ್ತುಗಳಿಗೆ ಪೂರಕವಾಗಿರುತ್ತವೆ ಹಾಗೂ ಶಾಶ್ವತ ನಿವಾಸವು ಅರ್ಹತಾ ಮಾನದಂಡವಾಗಿರುತ್ತದೆ.

10.3 ಈ ಮಾರ್ಗಸೂಚಿಗಳ ಪ್ರಾರಂಭದ ಮೊದಲು ಸಕ್ಷಮ ಕಂದಾಯ ಅಧಿಕಾರಿಗಳು ನೀಡಿದ ವಸತಿ ಪ್ರಮಾಣಪತ್ರಗಳು ಮತ್ತು ನಿವಾಸ ಪ್ರಮಾಣಪತ್ರಗಳು ಮತ್ತು ಈ ಮಾರ್ಗಸೂಚಿಗಳ ಪ್ರಾರಂಭದ ದಿನಾಂಕದಂದು ಮಾನ್ಯವಾಗಿರುತ್ತವೆ, ಇವು ಕಾನೂನಿನ ಪ್ರಕಾರ ಸಕ್ಷಮ ಪ್ರಾಧಿಕಾರವು ರದ್ದುಗೊಳಿಸದ ಹೊರತು ಅಥವಾ ಅಮಾನ್ಯವೆಂದು ಘೋಷಿಸದ ಹೊರತು ಮಾನ್ಯವಾಗಿಯೇ ಇರುತ್ತವೆ.

10.4 ಈ ಮಾರ್ಗಸೂಚಿಗಳು ಪ್ರಾರಂಭವಾದ ನಂತರ, ಶಾಶ್ವತ ನಿವಾಸದ ಪ್ರಮಾಣೀಕರಣಕ್ಕಾಗಿ ಎಲ್ಲಾ ಅರ್ಜಿಗಳನ್ನು ಪ್ರಕ್ರಿಯೆಗೊಳಿಸಲಾಗುತ್ತದೆ ಮತ್ತು ಶಾಶ್ವತ ನಿವಾಸ ಪ್ರಮಾಣಪತ್ರಗಳನ್ನು ಈ ಮಾರ್ಗಸೂಚಿಗಳು ಮತ್ತು ಅದರ ಅಡಿಯಲ್ಲಿ ನೀಡಲಾದ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳಿಗೆ ಅನುಗುಣವಾಗಿ ನೀಡಲಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Digitally signed by
RAJENDER KUMAR KATARIA
Date: 29-06-2026 17:26:22

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಂದಾಯ ಇಲಾಖೆ.

**ಇವರಿಗೆ:**

1. ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
2. ಆಯುಕ್ತರು, ಕಂದಾಯ ಆಯುಕ್ತಾಲಯ, ಬೆಂಗಳೂರು
3. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
4. ನಿರ್ದೇಶಕರು, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ
5. ಎಲ್ಲಾ ಇಲಾಖಾ ಮುಖ್ಯಸ್ಥರು
6. ಎಲ್ಲಾ ಪ್ರಾದೇಶಿಕ ಆಯುಕ್ತರು
7. ಎಲ್ಲಾ ಜಿಲ್ಲಾಧಿಕಾರಿಗಳು/ ಎಲ್ಲಾ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

**8.** ಎಲ್ಲಾ ಸಹಾಯಕ ವಿಭಾಗಾಧಿಕಾರಿಗಳು

**9.** ಎಲ್ಲಾ ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಮುಖ್ಯಾಧಿಕಾರಿಗಳು

**10.** ಎಲ್ಲಾ ತಹಶೀಲ್ದಾರ್‌ಗಳು

**11.** NIC, Bangalore.

**12.** ಶಾಖಾ ರಕ್ಷಾ ಕಡತಗಳು/ಇತರೆ.